ವಿಳಾಸ : UNIREG
ದೂರವಾಣಿ ಸಂಖ್ಯೆ :2419440/2419361
ಫ್ಯಾಕ್ಸ್ ಸಂಖ್ಯೆ : 0821- 2419363/2419301

ಇಮೇಲ್ :registrar@uni-mysore.ac.in
ವೆಬ್ ಸೈಟ್: www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್‌ಭವನ, ಅಂಚೆ ಪೆಟ್ಟಿಗೆ ಸಂಖ್ಯೆ 406,
ಮೈಸೂರು-570 005.

ವಿಷಯ: ಡಾ.ಕೆ.ಎಸ್.ವೆಂಕಟೇಶ್, ಪ್ರಾಧ್ಯಾಪಕರು, ಸಕ್ಕರೆ ತಂತ್ರಜ್ಞಾನ ವಿಭಾಗ, ಸ್ನಾತಕೋತ್ತರ ಕೇಂದ್ರ, ಮಂಡ್ಯ ಇವರಿಗೆ ಪ್ರಾಧ್ಯಾಪಕರಾಗಿ ನೀಡಿರುವ ಸಿಎಎಸ್ ಪದೋನ್ನತಿಯನ್ನು ಹಿಂದೂಡುವ ಬಗ್ಗೆ.

ಉಲ್ಲೇಖ: 1. ವಿಶ್ವವಿದ್ಯಾನಿಲಯ ಆದೇಶ ಸಂಖ್ಯೆ:ಇಟಿ2(10)/576/2011-12, ದಿನಾಂಕ 27-02-2019

2. ಮಾನ್ಯ ಕುಲಪತಿಯವರ ಆದೇಶ ದಿನಾಂಕ 29-09-2020.

****

ಪ್ರಸ್ತಾವನೆ:

ಡಾ.ಕೆ.ಎಸ್.ವೆಂಕಟೇಶ್, ಪ್ರಾಧ್ಯಾಪಕರು, ಸಕ್ಕರೆ ತಂತ್ರಜ್ಞಾನ ವಿಭಾಗ, ಸ್ನಾತಕೋತ್ತರ ಕೇಂದ್ರ, ಮಂಡ್ಯ ಇವರು ತಮ್ಮ ಪತ್ರದಲ್ಲಿ ಸಿಎಎಸ್ ಅಡಿಯಲ್ಲಿ ಪ್ರಾಧ್ಯಾಪಕರಾಗಿ ಪದೋನ್ನತಿ ಹೊಂದಿದ್ದು, ಪದೋನ್ನತಿಯನ್ನು 01-02-2016ಕ್ಕೆ ನೀಡಲಾಗಿದೆ.

ಡಾ.ಕೆ.ಎಸ್.ವೆಂಕಟೇಶ್ ಅವರು 01-06-2012ರಿಂದ ಜಾರಿಗೆ ಬಂದಂತೆ ಸಹಪ್ರಾಧ್ಯಾಪಕರಾಗಿದ್ದು, 01-06-2015ಕ್ಕೆ ಪ್ರಾಧ್ಯಾಪಕರಾಗಿ ಪದೋನ್ನತಿಯನ್ನು ಹೊಂದಲು ಅರ್ಹನಿದ್ದು, ಈ ಅವಧಿಯಲ್ಲಿ 05 ಪ್ರಕಟಣೆಗಳನ್ನು ಸಹ ಪ್ರಕಟಿಸಿರುತ್ತೇನೆ ಎಂದು ತಿಳಿಸಿರುತ್ತಾರೆ. ಆದರೆ ಪದೋನ್ನತಿಯನ್ನು ನೀಡುವ ಸಂದರ್ಭದಲ್ಲಿ 01-02-2016ಕ್ಕೆ ಪ್ರಾಧ್ಯಾಪಕರಾಗಿ ಪದೋನ್ನತಿ ನೀಡಿರುವುದನ್ನು 01-06-2015ಕ್ಕೆ ಜಾರಿಗೆ ಬಂದಂತೆ ಪ್ರಾಧ್ಯಾಪಕರಾಗಿ ಪದೋನ್ನತಿ ನೀಡುವಂತೆ ಕೋರಿರುತ್ತಾರೆ.

ಈ ಸಂಬಂಧ ವಿಷಯವನ್ನು ಅಧ್ಯಾಪಕರುಗಳ ಪದೋನ್ನತಿಯಲ್ಲಿನ ಕುಂದು ಕೊರತೆಗಳನ್ನು ಪರಿಶೀಲಿಸಲು ರಚಿಸಲಾಗಿರುವ ಸಮಿತಿ ಸಭೆಗೆ ಮಂಡಿಸಲಾಗಿತ್ತು. ದಿನಾಂಕ 31.7.2020ರಂದು ಜರುಗಿದ ಸಮಿತಿ ಸಭೆಯು ಈ ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತದೆ.

"The request made by Dr.K.S.Venkatesh, Department of Sugar Technology, P.G.Centre, Mandya shall be considered as five publications are made within the eligibility period and the date of promotion to Professor shall be advanced from 01-02-2016 to 01-06-2015 i.e. to the date of eligibility for promotions as per UGC guidelines"

ಮೇಲ್ಕಂಡ ಶಿಫಾರಸ್ಸಿನಂತೆ ಕ್ರಮವಹಿಸಲು ಮಾನ್ಯ ಕುಲಪತಿಯವರು ಆದೇಶಿಸಿರುವ ಹಿನ್ನೆಲೆಯಲ್ಲಿ ಈ ಕೆಳಕಂಡ ಆದೇಶ:

## ಆದೇಶ ಸಂಖ್ಯೆ: ಇಟಿ2(10)/254/2015-16, ದಿನಾಂಕ 03ನೇ ಅಕ್ಟೋಬರ್ 2020

ಸಿಎಎಸ್ ಕುಂದು-ಕೊರತೆಗಳ ಪರಿಶೀಲನಾ ಸಮಿತಿಯ ಶಿಫಾರಸ್ಸು ಹಾಗೂ ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ, ಡಾ.ಕೆ.ಎಸ್.ವೆಂಕಟೇಶ್, ಪ್ರಾಧ್ಯಾಪಕರು, ಸಕ್ಕರೆ ತಂತ್ರಜ್ಞಾನ ವಿಭಾಗ, ಸ್ನಾತಕೋತ್ತರ

ಕೇಂದ್ರ, ಮಂಡ್ಯ ಅವರಿಗೆ ಉಲ್ಲೇಖಿತ(1)ರ ಆದೇಶದ ರೀತ್ಯಾ ಎಜಿಪಿ 10000 ಹಂತಕ್ಕೆ ನೀಡಲಾಗಿರುವ ಪದೋನ್ನತಿ ದಿನಾಂಕವನ್ನು ಈ ಕೆಳಕಂಡಂತೆ ಪರಿಷ್ಕರಿಸಲಾಗಿದೆ.

| ಅಧ್ಯಾಪಕರ ಹೆಸರು ಮತ್ತು ವಿಭಾಗ | ಸಹಪ್ರಾಧ್ಯಾಪಕ ಎಜಿಪಿ 9000 ಹಂತದ ಪದೋನ್ನತಿ ನೀಡಿರುವ ದಿನಾಂಕ | ಪ್ರಾಧ್ಯಾಪಕ ಎಜಿಪಿ 10000 ಹಂತಗಳ ಪದೋನ್ನತಿಯನ್ನು ಈಗಾಗಲೇ ನೀಡಲಾಗಿರುವ ದಿನಾಂಕ | ಪ್ರಾಧ್ಯಾಪಕ ಎಜಿಪಿ 10000 ಹಂತಗಳ ಪದೋನ್ನತಿಯನ್ನು ಪರಿಷ್ಕರಿಸಿ ನೀಡುತ್ತಿರುವ ದಿನಾಂಕ |
|---|---|---|---|
| ಡಾ.ಕೆ.ಎಸ್.ವೆಂಕಟೇಶ್, ಸಕ್ಕರೆ ತಂತ್ರಜ್ಞಾನ ವಿಭಾಗ, ಸ್ನಾತಕೋತ್ತರ ಕೇಂದ್ರ, ಮಂಡ್ಯ | 01-06-2012 | 01-02-2016 | 01-06-2015 |

ಸಿಎಎಸ್ ಅಡಿಯಲ್ಲಿ ನೀಡಿರುವ ಪದೋನ್ನತಿಗಳು ವಿಶ್ವವಿದ್ಯಾನಿಲಯದ ಶಿಸ್ತು ವ್ಯಾಪ್ತಿ ಮತ್ತು ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ ಎಂಬ ಷರತ್ತನ್ನು ವಿಧಿಸಲಾಗಿದೆ.

ಆದೇಶದ ಮೇರೆಗೆ,

ಕುಲಸಚಿವ

ಪ್ರತಿ:

1. ಡಾ.ಕೆ.ಎಸ್.ವೆಂಕಟೇಶ್, ಪ್ರಾಧ್ಯಾಪಕರು, ಸಕ್ಕರೆ ತಂತ್ರಜ್ಞಾನ ವಿಭಾಗ, ಸ್ನಾತಕೋತ್ತರ ಕೇಂದ್ರ, ಮಂಡ್ಯ
2. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಮಂಡ್ಯ
3. ಹಣಕಾಸು ಅಧಿಕಾರಿಯವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಸರ್ಕಾರಿ ಲೆಕ್ಕ ಪರಿಶೋಧಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಉಪಕುಲಸಚಿವರು(ಸಾಮಾನ್ಯ)/ಸಹಾಯಕ ಕುಲಸಚಿವ/ಅಧೀಕ್ಷಕರು (ಸಿಬ್ಬಂದಿ), ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ,ಮೈಸೂರು.
6. ಕುಲಪತಿ/ಕುಲಸಚಿವ/ಹಣಕಾಸು ಅಧಿಕಾರಿ/ಕುಲಸಚಿವ(ಪ) ಅವರುಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಕಛೇರಿ ಪ್ರತಿ.